**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ಸಂಖ್ಯೆ: **87/2021**</u>

| | | |
|---|---|---|
| ಆರೋಪಿಯ ಹೆಸರು | : | ಸತೀಶ |
| ತಂದೆಯ ಹೆಸರು | : | ಲೇಟ್ ತಮ್ಮಯ್ಯ |
| ವಯಸ್ಸು | : | 33 ವರ್ಷ, |
| ಉದ್ಯೋಗ | : | ಜಿರಾಯ್ತಿ ಕೆಲಸ |
| ವಾಸಸ್ಥಳ | : | ಮಾಚಗೊಂಡನಹಳ್ಳಿ ಗ್ರಾಮ, ಸಖರಾಯಪಟ್ಟಣ ಹೋಬಳಿ, ಕಡೂರು ತಾಲ್ಲೂಕು. |

<u>ಕಲಂ **313** ಸಿ.ಆರ್ ಪಿ.ಸಿ. ಅಡಿಯಲ್ಲಿ ಆರೋಪಿತನ ಹೇಳಿಕೆ.</u>

ಪ್ರಶ್ನೆ -1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರ: ಕೇಳಿದ್ದೇನೆ.

ಪ್ರಶ್ನೆ -2 ಪ್ರಾ.ಸಾ.3-ರಾಜಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ಅವರು ಕಳೆದ ವರ್ಷ ಜನವರಿ 22 ನೇ ತಾರೀಕಿನಂದು ನಿಶಾನೆ ಪಿ.12 ನೋಟೀಸ್ ಮತ್ತು ನಿಶಾನೆ ಪಿ.13 ಮಹಜರ್ ಗಳಿಗೆ ಕಡೂರು ವೃತ್ತ ನಿರೀಕ್ಷಕರ ಕಛೇರಿಯಲ್ಲಿ ರುಜು ಮಾಡಿದ್ದಾಗಿ, ಮು.ಮಾ.1 ರಿಂದ 5, 5 ಸೀಲ್ ಮಾಡಿರುವ ವಸ್ತುಗಳ ಕವರುಗಳನ್ನು ಅವರ ಸಮಕ್ಷಮ ಚಾಸಾ.19 ಪ್ರತಾಪ್ ಬಿ.ಟಿ., ರವರು ಹಾಜರು ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ: ಸುಳ್ಳು.

ಪ್ರಶ್ನೆ -3 ಪ್ರಾ.ಸಾ.4-ರಾಕೇಶ, ಇವರು ತಮ್ಮ ಸಾಕ್ಷ್ಯದಲ್ಲಿ ಅವರು ತೋಟದಲ್ಲಿ ಕೆಲಸ ಮಾಡುವಾಗ ಅವರ ಊರಿನವರು ತಮ್ಮಯ್ಯ ಮೃತಪಟ್ಟಿದ್ದಾಗಿ ತಿಳಿಸಿದ ಮೇರೆಗೆ, ಅವರು ಹೋಗಿ ನೋಡಿದಾಗ ಶವ ಇದ್ದುದಾಗಿ, ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಮೃತ ತಮ್ಮಯ್ಯರವರ ಶವವನ್ನು ನೋಡಿದ್ದಾಗಿ, ನಿಪಿ.5 ರಿಂದ ನಿಪಿ.10 ಫೋಟೋಗಳಲ್ಲಿ ಮೃತ ತಮ್ಮಯ್ಯರವರ ಶವ ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ: ಸುಳ್ಳು.

ಪ್ರಶ್ನೆ -4 ಪ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಟ್ರ್ಯಾಕ್ಟರ್ ಸಾಲದ ವಿಚಾರದಲ್ಲಿ ಮೃತ ತಮ್ಮಯ್ಯ ಮತ್ತು ಆರೋಪಿಯಾದ ನಿನ್ನ ನಡುವೆ ಗಲಾಟೆಯಾಗಿ, ಮೃತ ತಮ್ಮಯ್ಯನನ್ನು ಮನೆಯಿಂದ ಆರೋಪಿಯಾದ ನೀನು ಓಡಿಸಿಕೊಂಡು ಕಲ್ಲಿನಿಂದ ಹೊಡೆದು ಸಾಯಿಸಿದ್ದಾಗಿ ಚಾಸಾ.9 ರವರು ಅವರಿಗೆ ತಿಳಿಸಿದ್ದಾಗಿ, ಆ ಬಗ್ಗೆ ಅವರು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -5 ಪ್ರಾ.ಸಾ.5-ಕಾರ್ತಿಕ್, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಅವರ ತಾಯಿಯ ದೊಡ್ಡಣ್ಣನ ಮಗನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ನನಗೆ ಕಾರ್ತಿಕ್ ನೊಂದಿಗೆ ಯಾವುದೇ ಸಂಬಂಧ ಇಲ್ಲ.

ಪ್ರಶ್ನೆ -6 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮೃತ ತಮ್ಮಯ್ಯ ಗೊತ್ತಿದ್ದಾಗಿ, ಚಾಸಾ.1 ಉಷಾ ರವರ ಗಂಡ ತೀರಿಕೊಂಡ ನಂತರ ಮೃತ ತಮ್ಮಯ್ಯರವರ ಮನೆಯಲ್ಲೇ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -7 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ನಿರುದ್ಯೋಗಿಯಾಗಿದ್ದು, ಮೃತ ತಮ್ಮಯ್ಯರವರ ಎಲ್ಲಾ ಜವಬ್ದಾರಿಯನ್ನು ವಹಿಸಿಕೊಂಡಿದ್ದಾಗಿ, ಮೃತ ತಮ್ಮಯ್ಯ ರವರು ಸಾಲ ಮಾಡಿ ಆರೋಪಿಯಾದ ನಿನಗೆ ಟ್ರಾಕ್ಟರ್ ಖರೀದಿಸಿ ವ್ಯವಹಾರ ಮಾಡಲು ಕೊಟ್ಟಿದ್ದಾಗಿ, ಆದರೆ ಆರೋಪಿಯಾದ ನೀನು ಟ್ರ್ಯಾಕ್ಟರ್ ನ್ನು ಉಪಯೋಗಿಸದೇ ಹಾಗೇ ನಿಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ -8 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮೃತ ತಮ್ಮಯ್ಯ ಹಾಗೂ ಚಾಸಾ.10 ರವರ ಮನೆ ಅಕ್ಕಪಕ್ಕ ಇದ್ದು, ಅವರು ದಿಃ 11.01.2021 ರಂದು ಮದ್ಯಾಹ್ನ 3.00 ಗಂಟೆಗೆ ಊಟಕ್ಕೆಂದು

ಮನೆಗೆ ಬಂದಿದ್ದಾಗಿ, ಊಟ ಮುಗಿಸಿಕೊಂಡು ಮಧ್ಯಾಹ್ನ 3.20 ಕ್ಕೆ ಮೃತರು ಅವರ ಮಾವನ ಮನೆಗೆ ಹೋಗುತ್ತಿದ್ದುದಾಗಿ, ಆಗ ಅವರು ಸಿಮೆಂಟ್ ರಸ್ತೆಗೆ ಬಂದಾಗ ಆರೋಪಿಯಾದ ನೀನು ಕಲ್ಲು ಹಿಡಿದುಕೊಂಡು ಅವರ ಮಾವನನ್ನು ಓಡಿಸಿಕೊಂಡು ಬರುತ್ತಿದ್ದುದಾಗಿ, ಆಗ ಅವರು ಯಾಕೆ ಓಡಿಸಿಕೊಂಡು ಹೋಗುತ್ತಿದ್ದೀಯಾ ಎಂದು ಆರೋಪಿಯಾದ ನಿನ್ನನ್ನು ಕೇಳಿದ್ದು, ಆರೋಪಿಯಾದ ನೀನು ಮತ್ತು ಮೃತ ತಮ್ಮಯ್ಯರವರು ಒಂದು ಗಲ್ಲಿಯೊಳಗೆ ಓಡಿಹೋಗಿದ್ದಾಗಿ, ನಿಮ್ಮಿಬ್ಬರ ನಡುವೆ ಹತ್ತು ಅಡಿ ಅಂತರವಿದ್ದುದಾಗಿ, ಆಗ ಅವರು ಬೈಕು ನಿಲ್ಲಿಸಿ ಗಲ್ಲಿಯೊಳಗೆ ಹೋದಾಗ ಅವರ ಮಾವನವರು ಕೆಳಗೆ ಬಿದ್ದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -9 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿಯಾದ ನೀನು ಮೃತಪಟ್ಟ ಅವರ ಮಾವನ ಮೇಲೆ ಕುಳಿತುಕೊಂಡು ಕಲ್ಲಿನಿಂದ ಮುಖಕ್ಕೆ ಜಜ್ಜುತ್ತಿದ್ದುದಾಗಿ, ಅವರ ಮಾವ ಅಂಗಾತ ಬಿದ್ದಿದ್ದಾಗಿ, ಆತನ ಮೇಲೆ ಆರೋಪಿಯಾದ ನೀನು ಕುಳಿತಿದ್ದು, ಜಜ್ಜಿದ ಪರಿಣಾಮ ರಕ್ತ ನಿಮ್ಮಿಬ್ಬರ ಬಟ್ಟೆಗೆ ಮತ್ತು ಗೋಡೆಗೆ ಚೆಲ್ಲಿದ್ದಾಗಿ, ಆರೋಪಿಯಾದ ನೀನು ಜಜ್ಜುವಾಗ ತಾನು ಕೇಳಿದ್ದನ್ನು ಕೊಡುವುದಿಲ್ಲ, ತನಗೆ ಬೈಯ್ಯುತ್ತೀರಿ ಹಾಗೆ ಹೀಗೆ ಎಂದು ಬೈಯ್ಯುತ್ತಿದ್ದು, 2-3 ನಿಮಿಷದಲ್ಲಿ ಅವರೂರಿನಲ್ಲಿರುವ ಗಣೇಶ ಬಂದಿದ್ದಾಗಿ, ನಂತರ 5 ನಿಮಿಷದಲ್ಲಿ ಊರಿನ ಗ್ರಾಮಸ್ಥರೆಲ್ಲಾ ಬಂದು ಸೇರಿದ್ದಾಗಿ, ಗಣೇಶಪ್ಪ ಬಂದ ನಂತರ ಅವರು ಆರೋಪಿಯಾದ ನಿನ್ನನ್ನು ಹಿಡಿದುಕೊಳ್ಳಲು ಹೋದಾಗ ನೀನು ಅವರನ್ನು ನೂಕಿ ಕಲ್ಲನ್ನು ಅಲ್ಲಿಯೇ ಬಿಸಾಡಿ ಓಡಿಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -10 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಸ್ವಲ್ಪ ಸಮಯದಲ್ಲಿ ಸ್ಥಳಕ್ಕೆ ಬಂದ ಚಾಸಾ-1 ಉಷಾ ರವರನ್ನು ಅವರು ವಿಚಾರ ಮಾಡಿದಾಗ, ಅದೇ ದಿನ ಟ್ರ್ಯಾಕ್ಟರ್ ಸಾಲದ ಕಂತು ಕಟ್ಟುವ ಬಗ್ಗೆ ಬ್ಯಾಂಕಿನವರು ಬಂದಿದ್ದಾಗಿ, ಆಸ್ತಿಯನ್ನು ಜಪ್ತಿ ಮಾಡುತ್ತೇವೆ ಎಂದು ಹೇಳಿದಾಗ, ಮೃತ ತಮ್ಮಯ್ಯನವರು ಆರೋಪಿಯಾದ ನಿನಗೆ ಬೈದಿರುವುದಾಗಿ ತಿಳಿಸಿದ್ದಾಗಿ ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -11 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಮೃತ ತಮ್ಮಯ್ಯ ಮತ್ತು ಆರೋಪಿಯಾದ ನಿನ್ನ ನಡುವೆ ಜಗಳ ಶುರುವಾಗಿ, ಮದ್ಯಾಹ್ನ 3.15-3.20 ರ ಸಮಯಕ್ಕೆ ಮೃತ ತಮ್ಮಯ್ಯ ಮನೆಯಿಂದ ಹೊಲಕ್ಕೆ ಹೊರಟಾಗ ಪುನಃ ನಿಮಿಬ್ಬರ ನಡುವೆ ಜಗಳವಾಯಿತು ಎಂದು ಚಾಸಾ.1 ಉಷಾ ರವರು ಅವರಿಗೆ ತಿಳಿಸಿದ್ದಾಗಿ, ಎಲ್ಲರ ಮುಂದೆ ಸಾಲದ ಕಂತು ಕಟ್ಟಿಲ್ಲ ಎಂದು ನನ್ನ ಮರ್ಯಾದೆ ತೆಗೆಯುತ್ತೀಯ ಎಂದು ಹೇಳಿ ಆರೋಪಿಯಾದ ನೀನು ತಮ್ಮಯ್ಯನೊಂದಿಗೆ ಜಗಳ ಮಾಡುತ್ತಾ, ತಮ್ಮಯ್ಯನನ್ನು ಅಟ್ಟಿಸಿಕೊಂಡು ಹೋಗಿದ್ದಾಗಿ ಅವರಿಗೆ ತಿಳಿಸಿದ್ದಾಗಿ, ಸದರಿ ಎಲ್ಲಾ ವಿಚಾರವನ್ನು ಅವರು ಪೋಲೀಸರಿಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -12 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅವರು ಸ್ಥಳವನ್ನು ಪೋಲೀಸರಿಗೆ ತೋರಿಸಿದ ಮೇರೆಗೆ ನಿಪಿ.25 ಮಹಜರ್ ನ್ನು ದಿಃ 12.01.2021 ರಂದು ಮಧ್ಯಾಹ್ನ 1.30 ರಿಂದ 2.30 ರ ತನಕ ಸರ್ಕಾರಿ ಶಾಲೆಯ ಹಿಂಭಾಗದಲ್ಲಿ ಬರೆದಿದ್ದಾಗಿ, ಸದರಿ ನಿಪಿ.25 ಮಹಜರ್ ನಲ್ಲಿ ಒಂದು ಕಾಡು ಜಾತಿಯ ಕಲ್ಲು, ರಕ್ತವಾದ ಮಣ್ಣು, ಸಾದಾ ಮಣ್ಣು ಇವುಗಳನ್ನು ಪೋಲೀಸರು ಅಮಾನತು ಪಡಿಸಿಕೊಂಡಿದ್ದಾಗಿ, ಆ ಸಮಯದಲ್ಲಿ ನಿಪಿ.7, 8, 26 ಮತ್ತು 27 ರ ಪೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ**?**

ಉತ್ತರಃ

ಪ್ರಶ್ನೆ -13 ಪ್ರಾ.ಸಾ.6-ರಂಗನಾಥ ಡಿ.ಕೆ., ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರ ಬ್ಯಾಂಕಿನಿಂದ ರೂ.6 ಲಕ್ಷ ಹಣವನ್ನು ಸಾಲ ಪಡೆದಿದ್ದಾಗಿ, ಅದಕ್ಕೆ ನಿನ್ನ ತಂದೆ Co-obligant ಆಗಿದ್ದಾಗಿ , ದಿಃ 04-10-2020 ಕ್ಕೆ ಇದ್ದ ಸಾಲದ ಮೊದಲ ಕಂತನ್ನು ಆರೋಪಿಯಾದ ನೀನು ಕಟ್ಟದಿದ್ದಾಗ ಅವರು ಮತ್ತು ಚಾಸಾ.12 ರವರು ಆರೋಪಿಯಾದ ನಿನ್ನ ಮನೆಗೆ ವಿಚಾರಿಸಲು ಹೋದಾಗ, ಅದೇ ತಿಂಗಳಲ್ಲಿ ಕಟ್ಟುತ್ತೇನೆ ಎಂದು ಆರೋಪಿಯಾದ ನೀನು ಹೇಳಿದ್ದಾಗಿ

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -14 ಪ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದಾದ ಒಂದು ತಿಂಗಳ ನಂತರ ಸಖರಾಯಪಟ್ಟಣ ಪೊಲೀಸ್ ಠಾಣೆಯಿಂದ ಫೋನ್ ಮಾಡಿ, ಆರೋಪಿಯಾದ ನೀನು ಸಾಲ ಪಡೆದ ಬಗ್ಗೆ ಅವರನ್ನು ವಿಚಾರಿಸಿದಾಗ ಅವರು ಸಾಲ ಪಡೆದ ಬಗ್ಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-15 ಪ್ರಾ.ಸಾ.7 ಗೋವಿಂದರಾಜು, ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರ ಬ್ಯಾಂಕಿನಿಂದ ರೂ.6 ಲಕ್ಷ ಹಣವನ್ನು ಸಾಲ ಪಡೆದಿದ್ದಾಗಿ, ಅದಕ್ಕೆ ನಿನ್ನ ತಂದೆ Co-obligant ಆಗಿದ್ದು, ಸದರಿ ಸಾಲದ ಕಂತನ್ನು ಆರೋಪಿಯಾದ ನೀನು ಕಟ್ಟದಿದ್ದಾಗ ಅವರು ಮತ್ತು ಚಾಸಾ.11 ರವರು ಆರೋಪಿಯಾದ ನಿನ್ನ ಮನೆಗೆ ವಿಚಾರಿಸಲು ಡಿಸೆಂಬರ್ 2020 ರಲ್ಲಿ ಹೋಗಿದ್ದಾಗ ನಿನ್ನನ್ನು, ನಿನ್ನ ತಂಗಿ ಮತ್ತು ತಾಯಿಯನ್ನು ವಿಚಾರಿಸಿ ಲೋನ್ ಕಟ್ಟುವಂತೆ ಹೇಳಿ ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-16 ಪ್ರಾ.ಸಾ.8 ಶಂಕರ, ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ 6-7 ತಿಂಗಳುಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ನಿಶಾನೆ ಪಿ.16 ನೋಟೀಸ್ ಮತ್ತು ಪಿ.17 ಮಹಜರ್ ಗೆ ಅವರು ರುಜು ಮಾಡಿದ್ದಾಗಿ, ನಿಶಾನೆ ಪಿ.18 ಮತ್ತು ಪಿ.19 ಫೋಟೋಗಳಲ್ಲಿ ಅವರ ಇರುವಿಕೆ ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-17 ಪ್ರಾ.ಸಾ.11 ಮಂಜುನಾಥ ಸಿ.ಜೆ. ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನ ತಂದೆಯನ್ನು ಕೊಲೆ ಮಾಡಿದ ಸಂಬಂಧ ನಿನ್ನ ರಕ್ತಸಿಕ್ತ ಬಟ್ಟೆಯನ್ನು ಹಾಜರು ಪಡಿಸಿದಾಗ ಪೊಲೀಸರು ರಾತ್ರಿ 8.15 ರಿಂದ 9.15 ರ ತನಕ ಬರೆದ ನಿಶಾನೆ ಪಿ.17 ಮಹಜರಿಗೆ ದಿಃ 11-01-

2021 ರಂದು ಸಖರಾಯಪಟ್ಟಣ ಪೋಲೀಸ್ ಠಾಣೆಯಲ್ಲಿ ಅವರು ಸಹಿ ಮಾಡಿದ್ದಾಗಿ, ನಿಶಾನೆ ಪಿ.18 ಮತ್ತು ಪಿ.19 ಫೋಟೋಗಳಲ್ಲಿ ಅವರ, ಆರೋಪಿಯಾದ ನಿನ್ನ ಮತ್ತು ಚಾಸಾ.13 ರವರ ಇರುವಿಕೆ ಕಂಡು ಬಂದಿದ್ದಾಗಿ, ಮು.ಮಾ.6 ಶರ್ಟನ್ನು ಮತ್ತು ಮು.ಮಾ.7 ಪ್ಯಾಂಟ್ ನ್ನು ಗುರುತಿಸಿದ್ದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ನಾನು ನಿಪಿ-18 & 19 ಫೋಟೋಗಳಲ್ಲಿ ಇದ್ದೇನೆ. ಅವುಗಳು ನಮ್ಮ ಮನೆಯಲ್ಲಿ ಇದ್ದವು. ಅವುಗಳನ್ನು ಅಲ್ಲಿಂದ ಪೊಲೀಸರು ತಂದು ಬಾಟಲಿಯಲ್ಲಿದ್ದ ರಕ್ತವನ್ನು ಅವುಗಳ ಮೇಲೆ ಚುಮುಕಿಸಿದರು.

ಪ್ರಶ್ನೆ -18 ಪ್ರಾ.ಸಾ.14 ದೇವರಾಜ, ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಎರಡೂವರೆ ವರ್ಷದ ಹಿಂದೆ ಮೃತ ತಮ್ಮಯ್ಯನ ಕೊಲೆಯಾಗಿದ್ದರ ಸಂಬಂಧ ಪೋಲೀಸರು ಮಹಜರು ಮಾಡಿದಾಗ ನಿಪಿ.2, 24 ಮತ್ತು 25 ಕ್ಕೆ ಸಹಿ ಮಾಡಿದ್ದಾಗಿ, ನಿಪಿ.2 ಮಹಜರ್ ಗೆ ಸ್ಥಳವನ್ನು ಚಾಸಾ.1 ರವರು ತೋರಿಸಿದ್ದ ಮೇರೆಗೆ ಮಧ್ಯಾಹ್ನ 12.00 ರಿಂದ 1.15 ರ ತನಕ ಬರೆದಿದ್ದಾಗಿ, ಆ ಕಾಲದಲ್ಲಿ ತೆಗೆದ ನಿಪಿ.3 ರ ಪೋಟೋದಲ್ಲಿ ಅವರ ಮತ್ತು ಚಾಸಾ.1 ಹಾಗೂ 2 ರವರ ಇರುವಿಕೆ ಕಂಡಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-19 ಪ್ರಾ.ಸಾ.14 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.25 ಮಹಜರನ್ನು ಮದ್ಯಾಹ್ನ 1.30 ರಿಂದ 2.15 ರ ತನಕ ಬರೆದಿದ್ದಾಗಿ, ಅವರು ನಿಪಿ.25 ಮಹಜರ್ ಗೆ ಅವರು ಕೊಲೆಯಾದ ಜಾಗ ಎಂದರೆ ಸ್ಕೂಲಿನ ಬಳಿ ಸಹಿ ಮಾಡಿದ್ದಾಗಿ, ಆ ಸಮಯದಲ್ಲಿ ತೆಗೆದ ನಿಪಿ.26 ಮತ್ತು 27 ರ ಪೋಟೋದಲ್ಲಿ ತನ್ನ ಇರುವಿಕೆ ಕಂಡುಬಂದಿದ್ದಾಗಿ, ಸದರಿ ಸ್ಥಳದಿಂದ ಮು.ಮಾ.8 ರಿಂದ 10 ಕಲ್ಲು, ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣನ್ನು ಅಮಾನತುಪಡಿಸಿಕೊಂಡಿದ್ದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -20 ಪ್ರಾ.ಸಾ.15-ಇಂದ್ರೇಶ, ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ತಮ್ಮಯ್ಯ ಹಾಗೂ ಅವರ ಮನೆ ಅಕ್ಕಪಕ್ಕದಲ್ಲಿ ಇರುವುದಾಗಿ, ಮೃತ ತಮ್ಮಯ್ಯ ತೀರುವ ಆರು ತಿಂಗಳ ಮೊದಲು ಚಾಸಾ.1 ಉಷಾ ರವರ ಗಂಡ

ತೀರಿಕೊಂಡು ಕಾರಣ ಆಕೆ ಮೃತ ತಮ್ಮಯ್ಯನವರ ಮನೆಯಲ್ಲಿಯೇ ವಾಸವಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಇಂದ್ರೇಶ್ ಮತ್ತು ತಮ್ಮಯ್ಯನವರ ಮನೆ ಅಕ್ಕಪಕ್ಕದಲ್ಲಿ ಇದೆ. ಆದರೆ ಉಷಾ ಅರಸೀಕೆರೆಯಲ್ಲಿ ವಾಸವಾಗಿದ್ದಳು.

ಪ್ರಶ್ನೆ -21 ಪ್ರಾ.ಸಾ.15 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ಮನೆ ಕೆಲಸ ಮಾಡಿಕೊಂಡು, ಅಲ್ಲಿಇಲ್ಲಿ ತಿರುಗಾಡಿಕೊಂಡು ನಿಮ್ಮ ತಂದೆಯ ಮಾತು ಕೇಳದ ಕಾರಣ ಆರೋಪಿಯಾದ ನೀನು ದುಡಿಮೆ ಮಾಡಿಕೊಂಡಿರಲಿ ಎಂದು ಮೃತ ತಮ್ಮಯ್ಯ ಜಮೀನನ್ನು ಖಾಸಗಿ ಬ್ಯಾಂಕಿನಲ್ಲಿ ಅಡ ಇಟ್ಟು ಬಂದ ಹಣದಿಂದ ಆರೋಪಿಯಾದ ನಿನ್ನ ಹೆಸರಿಗೆ ಟ್ರಾಕ್ಟರ್ ಮಾಡಿಕೊಟ್ಟಿದ್ದಾಗಿ, ಟ್ರಾಕ್ಟರಿನ ಕಂತಿನ ಹಣವನ್ನು ನೀನೇ ದುಡಿದು ಕಟ್ಟಬೇಕೆಂದು ಮೃತ ತಮ್ಮಯ್ಯನವರು ಆರೋಪಿಯಾದ ನಿನಗೆ ಹೇಳಿದ್ದಾಗಿ, ಮೃತ ತಮ್ಮಯ್ಯ ನವರು ಹೊಲದ ಬಳಿ ಹೋದಾಗ ಬ್ಯಾಂಕಿನವರು ಸಾಲ ಕಟ್ಟಿಲ್ಲ ಎಂದು ತಮ್ಮಯ್ಯನವರಿಗೆ ಜೋರು ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -22 ಪ್ರಾ.ಸಾ.15 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 11.01.2021 ರಂದು ಮಧ್ಯಾಹ್ನ 3.00 ಗಂಟೆ ಒಳಗೆ ಮೃತ ತಮ್ಮಯ್ಯನವರು ಮನೆಗೆ ಬಂದು ಆರೋಪಿಯಾದ ನಿನ್ನನ್ನು ಕಂತು ಯಾಕೆ ಕಟ್ಟಿಲ್ಲ ಎಂದು ಕೇಳಿ ಬೈಯ್ಯುತ್ತಿದ್ದುದಾಗಿ, ಅವರು ಮುಂದೆ ಜಗುಲಿ ಮೇಲೆ ಕೂತಿದ್ದಾಗ ಆರೋಪಿಯಾದ ನೀನು ಮತ್ತು ಮೃತ ತಮ್ಮಯ್ಯನ ನಡುವೆ ಜಗಳವಾಗುತ್ತಿದ್ದುದನ್ನು ಕೇಳಿಸಿಕೊಂಡಿದ್ದಾಗಿ, ಅವರು, ಆತನ ಹೆಂಡತಿ, ಆತನ ಮಗಳು ಹಾಗೂ ಚಾಸಾ.1 ರವರು ಸೇರಿ ಗಲಾಟೆಯನ್ನು ಬಿಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -23 ಪ್ರಾ.ಸಾ.15 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಆರೋಪಿಯಾದ ನೀನು ಪುನಃ ಮೃತ ತಮ್ಮಯ್ಯನವರ ಜಗಳ ಮಾಡಲು ಹೋದಾಗ ಮೃತ ತಮ್ಮಯ್ಯ ದನ ಹೊಡೆದುಕೊಂಡು ಬರುತ್ತೇನೆ

ಎಂದು ಹೇಳಿ ಜಮೀನಿನ ಕಡೆ ಹೋಗಿದ್ದಾಗಿ, ಆಗ ಅವರೂರಿನ ಶಾಲೆ ಬಳಿ ನೀನು ಕಲ್ಲಿನಿಂದ ತಮ್ಮಯ್ಯ ನವರ ತಲೆ, ಎಡಭಾಗದ ಕಿವಿಗೆ ಚುಚ್ಚಿ ಸಾಯಿಸಿದ್ದಾಗಿ, ಅಷ್ಟರಲ್ಲಿ ಯಾರೋ ಬಂದು ಅವರಿಗೆ ವಿಷಯ ತಿಳಿಸಿದ್ದಾಗಿ, ಕೊಲೆ ಮಾಡಿದಾಗ ಮಧ್ಯಾಹ್ನ 3.20 ರಿಂದ 3.30 ಆಗಿತ್ತು ಎಂದು, ಆರೋಪಿಯಾದ ನೀನು ಉಪಯೋಗಿಸಿದ ಮು.ಮಾ.1 ಕಲ್ಲನ್ನು ನೋಡಿ ಗುರುತಿಸಿದ್ದಾಗಿ, ಈ ಬಗ್ಗೆ ಅವರು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -24 ಪ್ರಾ.ಸಾ.16 ಶರತ್ ಎಂ., ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 05.02.2021 ರಂದು ಸಖರಾಯಪಟ್ಟಣ ಪೊಲೀಸರು ಈ ಪ್ರಕರಣದಲ್ಲಿ ತಮ್ಮಯ್ಯ ಬಿನ್ ಲೇ ಗಿರಿಯಪ್ಪ ರವರು ಸಾಲ ಪಡೆದ ದಾಖಲಾತಿ ಹಾಗೂ ದಿಃ 11.01.2021 ರಂದು ಮಾಚಗೊಂಡನಹಳ್ಳಿ ಗ್ರಾಮಕ್ಕೆ ಸಾಲ ವಸೂಲಾತಿಗಾಗಿ ಹೋದ ಸಿಬ್ಬಂದಿಗಳ ವಿವರ ನೀಡುವಂತೆ ನಿಪಿ.29 ಮನವಿ ಸಲ್ಲಿಸಿದ್ದಾಗಿ, ಅದರಂತೆ ದಿಃ 04.03.2021 ರಂದು ನಿಪಿ.30 ಕವಚಪತ್ರದೊಂದಿಗೆ ನಿಪಿ.31 ಅಕೌಂಟ್ ಎಕ್ಸ್‌ಟ್ರಾಕ್ಟನ್ನು ಅವರು ನೀಡಿದ್ದಾಗಿ, ಸದರಿ ದಾಖಲೆಯ ಪ್ರಕಾರ ಟ್ರಾಕ್ಟರಿಗಾಗಿ ಸಾಲವನ್ನು ಆರೋಪಿಯಾದ ನಿನ್ನ ಹೆಸರಿನಲ್ಲಿ ಪಡೆದಿರುವುದು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -25 ಪ್ರಾ.ಸಾ.17 ಕಾಂತರಾಜು, ಎ.ಇ.ಇ., ಇವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಖರಾಯಪಟ್ಟಣದ ಪೊಲೀಸರು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡುವಂತೆ ಮನವಿ ಸಲ್ಲಿಸಿದ ಮೇರೆಗೆ ಅವರು ದಿಃ 16.03.2021 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಖರಾಯಪಟ್ಟಣ ಪೊಲೀಸ್ ಠಾಣೆಯ ಈಶ್ವರಪ್ಪ, ಪಿಸಿ-23 ರವರು ತೋರಿಸಿದ ಜಾಗವನ್ನು ಪರಿಶೀಲಿಸಿ ನಿಶಾನೆ ಪಿ.32 ಮತ್ತು 33 ರಂತೆ ಎರಡು ನಕಾಶೆಯನ್ನು ತಯಾರಿಸಿ ಅವರ ಕಛೇರಿಯ ಮೂಲಕ ತನಿಖಾಧಿಕಾರಿಗಳಿಗೆ ನಿಶಾನೆ ಪಿ.34 ರಂತೆ ಪತ್ರ ಮುಖೇನ ಕಳುಹಿಸಿ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -26 ಪ್ರಾ.ಸಾ.18 ರಾಜಪ್ಪ ಜೆ.ಟಿ., ಪಿ.ಸಿ.514, ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ 11.01.2021 ರಂದು ಚಾಸಾ.26 ರವರ ಸೂಚನೆ ಮೇರೆಗೆ ಈ ಪ್ರಕರಣದ ನಿಶಾನೆ ಪಿ.36 ಪ್ರ.ವ.ವ. ಮತ್ತು ನಿಪಿ.1 ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-27 ಪ್ರಾ.ಸಾ.19 ವಿದ್ಯಾಶಂಕರನಾಯ್ಕ, ಹೆಚ್.ಸಿ.259, ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 11-01-2021 ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 6.00 ಗಂಟೆಗೆ ಪಿಸಿ ಶಿವಾಜಿನಾಯ್ಕ ರವರು ಸ್ಥಳದಲ್ಲಿ ಚಾಸಾ.1 ರವರು ನೀಡಿದ ನಿಪಿ.1 ದೂರನ್ನು ತಂದು ಹಾಜರುಪಡಿಸಿದ ಮೇರೆಗೆ, ಠಾಣಾ ಮೊ.ಸಂಃ 03/2021 ರಲ್ಲಿ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿಪಿ.36 ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿ ಸಿಬ್ಬಂದಿ ಮುಖಾಂತರ ಮೇಲಾಧಿಕಾರಿಗಳಿಗೂ ಮತ್ತು ನ್ಯಾಯಾಲಯಕ್ಕೂ ಕಳುಹಿಸಿದ್ದಾಗಿ, ಈ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ.28 ಹರೀಶ್ ರವರಿಗೆ ಹಸ್ತಾಂತರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -28 ಪ್ರಾ.ಸಾ. 20 ನಜೀರ್ ಬಿ.ಎ., ಪಿ.ಸಿ.653 ಇವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದಲ್ಲಿ ದಿಃ 11.01.2021 ರಂದು ತನಿಖಾಧಿಕಾರಿ ಚಾಸಾ.30 ರವರು ಅವರನ್ನು ತನಿಖಾ ಸಹಾಯಕನಾಗಿ ಸಹಕರಿಸುವಂತೆ ಸೂಚಿಸಿದ ಮೇರೆಗೆ, ಇಲಾಖೆಯಿಂದ ಒದಗಿಸಿದ ಸೋನಿ ಡಿಜಿಟಲ್ ಕ್ಯಾಮೆರಾದಲ್ಲಿ ಶವ ಸಿಕ್ಕಿದ ಬಗ್ಗೆ ಮಾಹಿತಿ ಬಂದ ಮೇರೆಗೆ ಅವರು ಅಲ್ಲಿಗೆ ಹೋಗಿ ಶವದ ಪೋಟೊ ತೆಗೆಯಲು ಸೂಚಿಸಿದ ಮೇರೆಗೆ ಅವರು ಪೋಟೋ ತೆಗೆದಿದ್ದಾಗಿ, ಅದೇ ದಿನ ಆರೋಪಿಯಾದ ನೀನು ಹಾಜರುಪಡಿಸಿದ ಬಟ್ಟೆಯನ್ನು ಅಮಾನತುಪಡಿಸಿ ಪಂಚನಾಮೆ ಬರೆದಾಗ ಅವರು ಪೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -29 ಪ್ರಾ.ಸಾ.20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮಾರನೇ ದಿನ ಚಿಕ್ಕಮಗಳೂರು ಎಂ.ಜಿ. ಆಸ್ಪತ್ರೆಯಲ್ಲಿ ಶವ ತನಿಖಾ ಕಾಲದಲ್ಲಿ ಪೋಟೋ ತೆಗೆಯಲು ಸೂಚಿಸಿದ ಮೇರೆಗೆ ಪೋಟೋಗಳನ್ನು ತೆಗೆದಿದ್ದಾಗಿ, ನಂತರ ಅದೇ ದಿನ ಶವ ದೊರೆತ ಸ್ಥಳದಲ್ಲಿ ಹಾಗೂ ಪಿರ್ಯಾದಿ ಮನೆ ಹತ್ತಿರ ಪಂಚನಾಮೆ ಮಾಡಿದಾಗ ಪೋಟೋಗಳನ್ನು ತೆಗೆದಿದ್ದಾಗಿ, ಸದರಿ ಎಲ್ಲಾ ನಿಶಾನೆ ಪಿ.3 ರಿಂದ 10 ಫೋಟೋಗಳನ್ನು ಕ್ಯಾಮೆರದಿಂದ ಡೇಟಾ ಕೇಬಲ್ ನ ಮೂಲಕ ಕಂಪ್ಯೂಟರ್ ಗೆ ವರ್ಗಾಯಿಸಿ ನಂತರ ಫೋಟೋಗಳನ್ನು ನಿಶಾನೆ ಪಿ.38 ರಂತೆ ಸಿಡಿ ಗೆ ವರ್ಗಾಯಿಸಿ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿ ನಿಪಿ.37 ರಂತೆ ದೃಢೀಕರಣ ಪತ್ರವನ್ನು ತನಿಖಾಧಿಕಾರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -30 ಪ್ರಾ.ಸಾ.21 ಡಾಃ ಆದರ್ಶ, ಕೀಲು ಮತ್ತು ಮೂಳೆ ತಜ್ಞರು, ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12.01.2021 ರಂದು ಈ ಪ್ರಕರಣಕ್ಕೆ ಸಂಬಂದಪಟ್ಟ ಮೃತ ತಮ್ಮಯ್ಯರವರ ಪಿ.ಎಂ.ನ್ನು ನಡೆಸುವಂತೆ ಸಖರಾಯಪಟ್ಟಣ ಪೊಲೀಸರು ನಿಪಿ.39 ರಂತೆ ಮನವಿ ಸಲ್ಲಿಸಿದ ಮೇರೆಗೆ ಅವರು ಅದೇ ದಿನ ಮೃತ ತಮ್ಮಯ್ಯರವರ ಪಿ.ಎಂ. ಅನ್ನು ಬೆಳಿಗ್ಗೆ 10.30 ರಿಂದ ಮದ್ಯಾಹ್ನ 12.30 ಗಂಟೆಯವರೆಗೂ ಅವರ ಆಸ್ಪತ್ರೆಯ ಶವಾಗಾರದಲ್ಲಿ ನಿಪಿ.5 ಮತ್ತು 6 ಫೋಟಗಳಲ್ಲಿ ಕಂಡಂತಹ ವ್ಯಕ್ತಿಯ ಮೇಲೆ ನಡೆಸಿ ನಿಶಾನೆ ಪಿ.40 ಮರಣೋತ್ತರ ಪರೀಕ್ಷಾ ವರದಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -31 ಪ್ರಾ.ಸಾ.21 ಇವರು ತಮ್ಮ ಸಾಕ್ಷ್ಯದಲ್ಲಿ ಮರಣೋತ್ತರ ಪರೀಕ್ಷೆಯನ್ನು ಮಾಡಿದಾಗ ದೇಹದ ಹೊರಭಾಗದಲ್ಲಿ ಈ ಕೆಳಕಂಡಂತೆ ಗಾಯಗಳು 1. *Lacerated wound present over the left side of face and head extending from the left ear to paretro tempome region of the skull the laceration is cavity deep exposing the underlying brain tissue a menagesm measuring 13 cm x 5 cmx x cavity deep, 2. Lacerated wound present over the upper part of occibitre bone measuring 6cm x 1 cm x bone deep, 3. Abrasion present over the right shoulder measuring 3cm x 2 cm, 4. The face is disfigures with fracture of zyogonurtie x*

*maxillam bond on the left side with fracture dislocation of left upper 1st , 2nd molar and left lower 1st, 2nd , 3rd molar teeth.*

*(II) Carnium and Spinal Canal*

1. *Skull and vertebrae : The skull is disfigured with multiple commited fracture of base of skull, left Iroto paretial bone.*
2. *Membrances: Lacerated.*
3. *Brain and spinal cord: Crushed at the region if laceration and pale* ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -32 ಪ್ರಾ.ಸಾ.21 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಉಳಿದಂತೆ ಇತರ ಅಂಗಾಂಗಳು ಸುಸ್ಥಿತಿಯಲ್ಲಿದ್ದು, ಮೇಲ್ಕಾಣಿಸಿದ ಎಲ್ಲಾ ಗಾಯಗಳು ಸದರಿ ವ್ಯಕ್ತಿ ಸಾಯುವ ಪೂರ್ವದಲ್ಲಿ ಆಗಿರುವ ಗಾಯವಾಗಿರುತ್ತವೆ ಎಂದು, ಅವರ ಅಭಿಪ್ರಾಯದ ಪ್ರಕಾರ "death is due to shock and hammerage as a result of blunt truama to head" ಎಂದು ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -33 ಪ್ರಾ.ಸಾ.21 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಪೋಲೀಸರು ಮೊಹರಾದ ಒಂದು ವಸ್ತುವನ್ನು ನೀಡಿ ಅದನ್ನು ಪರಿಶೀಲಿಸಿ ಅಂತಿಮ ಅಭಿಪ್ರಾಯ ತಿಳಿಸುವಂತೆ ಮನವಿಯನ್ನು ಸಲ್ಲಿಸಿದ ಮೇರೆಗೆ ಅದನ್ನು ಪರೀಕ್ಷಿಸಿದಾಗ ಅದು ಒಂದು ಕಾಡು ಜಾತಿಯ 2 ಹಿಡಿಗಾತ್ರದ ರಕ್ತದ ಕಲೆಗಳಿರುವ ಕಲ್ಲು ಎಂದು, ಅದರಂತೆ ಸದರಿ ಕಲ್ಲಿನಿಂದ ಹೊಡೆದಾಗ ಮೃತ ತಮ್ಮಯ್ಯರವರ ಶವ ಪರೀಕ್ಷೆಯಲ್ಲಿ ನಮೂದಿಸಿರುವ ಗಾಯಗಳಾಗುವ ಸಾಧ್ಯತೆ ಇರುತ್ತದೆ ನಿಪಿ.41 ರಂತೆ ಅಭಿಪ್ರಾಯ ನೀಡಿದ್ದಾಗಿ, ನಂತರ ಸದರಿ ಕಲ್ಲನ್ನು ಮರು ಪ್ಯಾಂಕಿಂಗ್ ಮಾಡಿ ಎಂ.ಜಿ.ಹೆಚ್. ಮೊಹರಿನೊಂದಿರೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -34 ಪ್ರಾ.ಸಾ.22 ಮಂಜುನಾಥ ಬಿ.ಎಸ್., ಇವರು ತಮ್ಮ ಸಾಕ್ಷ್ಯದಲ್ಲಿ

ಮುಂದುವರೆದು, ದಿನಾಂಕಃ 11-01-2021 ರಂದು ಸಂಜೆ ಸುಮಾರು 4.30 ಗಂಟೆಗೆ ಚಾಸಾ.28 ಹರೀಶ್ ಆರ್. ರವರು ಅವರಿಗೆ ದೂರವಾಣಿ ಕರೆ ಮಾಡಿ ಮಾಚಗೊಂಡನಹಳ್ಳಿ ಗ್ರಾಮದಲ್ಲಿ ತಮ್ಮಯ್ಯ ಎಂಬ ವ್ಯಕ್ತಿ ಕೊಲೆಯಾಗಿರುವುದಾಗಿ ಮಾಹಿತಿ ನೀಡಿದ ಮೇರೆಗೆ ಅವರು ಸಂಜೆ ಸುಮಾರು 6.30 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಮಾಚಗೊಂಡನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯ ಹಿಂಭಾಗದ ಒಂದು ಓಣಿಯಲ್ಲಿ ತಮ್ಮಯ್ಯ ಎಂಬ ವ್ಯಕ್ತಿಯ ಮೃತ ದೇಹ ಬಿದ್ದಿದ್ದು, ಅವರು ಸದರಿ ಸ್ಥಳದಲ್ಲಿ ನಿಪಿ.7 ಮತ್ತು 8 ರಂತೆ ಛಾಯ ಚಿತ್ರಗಳನ್ನು ತೆಗೆದು ಶವವನ್ನು ಚಿಕ್ಕಮಗಳೂರಿನ ಎಂ.ಜಿ. ಆಸ್ಪತ್ರೆಯ ಶವಗಾರಕ್ಕೆ ರವಾನಿಸಿ, ಸ್ಥಳದಲ್ಲಿ ಪ್ರಾಸಾ.19 ಪ್ರತಾಪ್. ಬಿ.ಟಿ. ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿ, ಚಾಸಾ.28 ಹರೀಶ್ ರವರನ್ನು ಆರೋಪಿಯಾದ ನಿನ್ನ ಪತ್ತೆಯ ಕಾರ್ಯಕ್ಕೆ ನೇಮಿಸಿದ ಮೇರೆಗೆ ಸದರಿಯವರು ಮತ್ತು ಸಿಬ್ಬಂದಿಯವರು ಆರೋಪಿಯಾದ ನಿನ್ನನ್ನು ದೇವನೂರು ರೈಲ್ವೆ ನಿಲ್ದಾಣದಲ್ಲಿ ವಶಕ್ಕೆ ಪಡೆದು ರಾತ್ರಿ 7.45 ಗಂಟೆಗೆ ಅವರ ಮುಂದೆ ಹಾಜರು ಪಡಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-35 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿಯಾದ ನಿನ್ನನ್ನು ದಸ್ತಗಿರಿ ಕ್ರಮ ಅನುಸರಿಸಿ ಬಂಧಿಸಿ ವಿಚಾರಣೆಗೆ ಒಳಪಡಿಸಿ ನಿನ್ನ ಸ್ವಇಚ್ಛಾ ಹೇಳಿಕೆಯನ್ನು ರಾತ್ರಿ 8.30 ರಿಂದ 9.00 ಗಂಟೆಯವರೆಗೆ ಪಡೆದುಕೊಂಡಿದ್ದಾಗಿ, ನಿನ್ನ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನೊಂದಿಗೆ ಬಂದರೆ ನಾನು ನನ್ನ ತಂದೆಯನ್ನು ಕೊಲೆ ಮಾಡಿದ ಸ್ಥಳ, ಕೊಲೆಗೆ ಬಳಸಿದ ಕಲ್ಲು ಹಾಗೂ ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ರಕ್ತವಾಗಿದ್ದು ಅವುಗಳನ್ನು ಹಾಜರು ಪಡಿಸುತ್ತೇನೆ" ಎಂದು ತಿಳಿಸಿದ್ದಾಗಿ, ಸದರಿ ನಿಪಿ.45 ರಂತೆ ನಿನ್ನ ಸ್ವ-ಇಚ್ಛಾ ಹೇಳಿಕೆಯ ಮೇರೆಗೆ ಪಂಚನಾಮೆಯನ್ನು ಕೈಗೊಳ್ಳುವ ಸಲುವಾಗಿ ಪ್ರಾಸಾ.8 ರಾಕೇಶ್ ಮತ್ತು ಪ್ರಾಸಾ-11 ರಂಗನಾಥ ಡಿ.ಕೆ. ರವರನ್ನು ಪಂಚರಾಗಿ ಸಹಕರಿಸುವಂತೆ ನಿಪಿ.16 ರಂತೆ ನೋಟೀಸ್ ನೀಡಿ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಬರಮಾಡಿಕೊಂಡು, ಆರೋಪಿಯಾದ ನೀನು ಆ ದಿನ ಧರಿಸಿದ್ದ ಬಟ್ಟೆಗಳನ್ನೇ ನಾನು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದಾಗಿ ನುಡಿದಿದ್ದಾಗಿ, ಅವುಗಳನ್ನು ಹಾಜರುಪಡಿಸಿದ ಮೇರೆಗೆ ಅವರು ನಿನಗೆ ತೊಡಲು ಬೇರೆ ಬಟ್ಟೆಗಳನ್ನು ನೀಡಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-36 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿಯಾದ ನೀನು ಹಾಜರು ಪಡಿಸಿದ ಬಟ್ಟೆಗಳನ್ನು

ಪರಿಶೀಲಿಸಲಾಗಿ ಅವುಗಳ ಪೈಕಿ ಒಂದು ತಿಳಿ ಹಳದಿ ಬಣ್ಣದ ತುಂಬು ತೋಳಿನ ಕಾಟನ್ ಶರ್ಟ್ ಆಗಿದ್ದು, ಅದರಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿದ್ದಾಗಿ, ಒಂದು ಬೂದು ಬಣ್ಣ ಟೆರಿಕಾಟ್ ಪ್ಯಾಂಟು, ಅದರಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿದ್ದಾಗಿ, ಸದರಿ ಬಟ್ಟೆಗಳನ್ನು ಪ್ರತ್ಯೇಕವಾಗಿ ಎನವಲಪ್ ನಲ್ಲಿ ಹಾಕಿ 'P' ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡು ಠಾಣೆಯಲ್ಲಿ ರಾತ್ರಿ 9.15 ರಿಂದ 10 ಗಂಟೆಯವರೆಗೆ ನಿಪಿ.17 ರಂತೆ ಪಂಚನಾಮೆಯನ್ನು ಜರುಗಿಸಿ, ಪಂಚರ ಸಹಿಗಳನ್ನು ಪಡೆದಿದ್ದಾಗಿ, ಮುದ್ದೆ ಮಾಲು 6 ಮತ್ತು 7 ಶರ್ಟು ಮತ್ತು ಪ್ಯಾಂಟನ್ನು ಆ ದಿನ ಆರೋಪಿಯಾದ ನೀನು ಹಾಜರು ಪಡಿಸಿದ ಬಟ್ಟೆಗಳು ಅವೇ ಎಂದು ನುಡಿದಿದ್ದಾಗಿ, ಆ ಕಾಲಕ್ಕೆ ನಿಪಿ.18 ಮತ್ತು 19 ರಂತ ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-37 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಅಮಾನತು ಪಡಿಸಿಕೊಂಡ ಮುದ್ದೆಮಗಳನ್ನು ನಿಪಿ.46 ರಂತೆ ಠಾಣಾ ಮಾಲುಪಟ್ಟಿ ಸಂಖ್ಯೆ 6/2021 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿ ಆರೋಪಿಯಾದ ನಿನ್ನನ್ನು ಠಾಣೆಯಲ್ಲಿ ಸೂಕ್ತ ಬಂಧನದಲ್ಲಿ ಇರಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -38 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ 12-01-2021 ರಂದು ಚಿಕ್ಕಮಗಳೂರು ಎಂ.ಜಿ. ಆಸ್ಪತ್ರೆಗೆ ಪ್ರಾಸಾ.9 ಗಣೇಶಪ್ಪ ಮತ್ತು ಪ್ರಾಸಾ.12 ರೇಣುಕಾಪ್ರಸಾದ್ ರವರನ್ನು ಶವ ಪರೀಕ್ಷೆಗೆ ಪಂಚರಾಗಿ ಸಹಕರಿಸುವಂತೆ ಕೋರಿ ನಿಪಿ.20 ರಂತೆ ನೋಟೀಸನ್ನು ಜಾರಿ ಮಾಡಿ, ಸದರಿ ಪಂಚರ ಸಮಕ್ಷಮ ಮೃತ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ರವರ ಶವ ಪರೀಕ್ಷೆಯನ್ನು ನಡೆಸಿದ್ದಾಗಿ, ಆ ಕಾಲಕ್ಕೆ ಮೃತನ ಮೈಮೇಲೆ ಕಂಡು ಬಂದಂತಹ ಗಾಯಗಳನ್ನು ಪಂಚನಾಮೆಯಲ್ಲಿ ನಮೂದು ಮಾಡಿ ಬೆಳಗ್ಗೆ 8 ಗಂಟೆಯಿಂದ 10.30 ಗಂಟೆಯವರೆಗೆ ನಿಪಿ.21 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -39 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ತೆರಳಿ ಹಾಜರಿದ್ದ ಪ್ರಾಸಾ.1 ರವರು ತೋರಿಸಿದ ಮೃತನ ಮನೆಯ ಎದುರಿಗೆ ಸ್ಥಳದಲ್ಲಿ ಪಂಚರಾದ ಪ್ರಾಸಾ.13 ಶಂಕರ್ ಮತ್ತು ಪ್ರಾಸಾ-14 ಮಂಜುನಾಥ ರವರ ಸಮಕ್ಷಮ ಸ್ಥಳದಲ್ಲಿ

ಬಿದ್ದಿದ್ದ ಕಲ್ಲನ್ನು ಆರೋಪಿಯಾದ ನೀನು ಎತ್ತಿಕೊಂಡು ನಿನ್ನ ತಂದೆಯನ್ನು ಓಡಿಸಿಕೊಂಡು ಹೋಗಿದ್ದಾಗಿ ತಿಳಿಸಿದ್ದಾಗಿ, ಸದರಿ ಸ್ಥಳದಲ್ಲಿ ಮಧ್ಯಾಹ್ನ 12 ಗಂಟೆಯಿಂದ 1 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿ, ಆ ಕಾಲದಲ್ಲಿ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿ, ನಿಪಿ.3 ಮತ್ತು 4 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -40 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಪ್ರಾಸಾ.5 ರವರು ಮಾಚಗೊಂಡನಹಳ್ಳಿ ಗ್ರಾಮದ ಪ್ರಾಥಮಿಕ ಸರ್ಕಾರಿ ಶಾಲೆಯ ಹಿಂಭಾಗದಲ್ಲಿ ಗಜೇಂದ್ರ ಎಂಬುವವರ ವಾಸದ ಮನೆಯ ಮುಂಭಾಗದಲ್ಲಿದ್ದ ಒಂದು ಓಣಿಯನ್ನು ತೋರಿಸಿ ಆರೋಪಿಯಾದ ನೀನು ನಿನ್ನ ತಂದೆ ತಮ್ಮಯ್ಯ ಅಲಿಯಾಸ್ ತಮ್ಮೇಗೌಡರವರನ್ನು ಓಡಿಸಿಕೊಂಡು ಬಂದು ಕಲ್ಲಿನಿಂದ ಆತನ ತಲೆಯನ್ನು ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿದ್ದಾಗಿ, ಸದರಿ ಸ್ಥಳವನ್ನು ಪರಿಶೀಲಿಸಲಾಗಿ ಅಲ್ಲಿ ರಕ್ತದ ಕಲೆಗಳಾಗಿದ್ದ ಎರಡು ಹಿಡಿಗಾತ್ರದ ಒಂದು ಕಾಡುಜಾತಿಯ ಕಲ್ಲು ಹಾಗೂ ಸದರಿ ಕಲ್ಲಿನ ಮೂರು ಕಡೆ ಚೂಪಾಗಿರುವುದು ಕಂಡು ಬಂದಿದ್ದಾಗಿ, ಸದರಿ ಕಲ್ಲನ್ನು ಮತ್ತು ಸದರಿ ಸ್ಥಳದಲ್ಲಿ ಬಿದ್ದಿದ್ದ ರಕ್ತಮಿಶ್ರಿತ ಮಣ್ಣು ಮತ್ತು ರಕ್ತವಿರದ ಸಾದಾ ಮಣ್ಣನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ 'P' ಎಂಬ ಅಕ್ಷರದಿಂದ ಸೀಲ್ ಮಾಡಿ ಪಂಚರಾದ ಪ್ರಾಸಾ.13 ಶಂಕರ್ ಮತ್ತು ಪ್ರಾಸಾ.14 ಮಂಜುನಾಥ ರವರ ಸಮಕ್ಷಮ ಅಮಾನತು ಪಡಿಸಿಕೊಂಡು ಮಧ್ಯಾಹ್ನ 1.15 ಗಂಟೆಯಿಂದ 2.30 ಗಂಟೆಯವರೆಗೆ ನಿಪಿ.25 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -41 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.25 ಪಂಚನಾಮೆಯ ಕಾಲಕ್ಕೆ ಅಮಾನತು ಪಡಿಸಿಕೊಂಡ ಮುದ್ದೆಮಗಳನ್ನು ನಿಪಿ.47 ರಂತೆ ಠಾಣಾ ಮಾಲುಪಟ್ಟಿ ಸಂಖ್ಯೆ 7/2021 ರಲ್ಲಿ ಅಳವಡಿಸಿಕೊಂಡು, ನ್ಯಾಯಾಲಯಕ್ಕೆ ಸಲ್ಲಿಸಿ, ನಂತರ ಆರೋಪಿಯಾದ ನಿನ್ನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -42 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 13-01-

2021 ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ಚಾಸಾ.17 ಸುಂದರೇಶ್ ರವರಿಗೆ ನಿಶಾನೆ ಪಿ.48 ರಂತೆ ಮನವಿಯನ್ನು ಸಲ್ಲಿಸಿದ ಮೇರೆಗೆ, ದಿನಾಂಕಃ 22.03.2021 ರಂದು ಪ್ರಾಸಾ-17 ರವರ ಮೂಲಕ ನಿಪಿ.32 ರಿಂದ 34 ರಂತೆ 2 ನಕ್ಷೆಗಳನ್ನು ಹಾಗೂ ಪತ್ರವನ್ನು ಸ್ವೀಕರಿಸಿದ್ದಾಗಿ, ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -43 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ.23 ರವರಿಗೆ ಕೃತ್ಯ ನಡೆದ ಸ್ಥಳದ ಅಸೆಸಮೆಂಟ್ ಪ್ರತಿಯನ್ನು ನೀಡಲು ನಿಶಾನೆ ಪಿ.49 ರಂತೆ ಮನವಿಯನ್ನು ನೀಡಿದ್ದರ ಮೇರೆಗೆ, ಸದರಿಯವರಿಂದ ದಿನಾಂಕಃ 03.02.2021 ರಂದು ನಿಪಿ.35 ರಂತೆ ದೃಢೀಕೃತ ಪ್ರತಿಯನ್ನು ಸ್ವೀಕರಿಸಿದ್ದಾಗಿ, ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -44 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 16-01-2021 ರಂದು ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.5 ರೇಣುಕಾ ಪ್ರಸಾದ್ ರವರ ಹೇಳಿಕೆಯನ್ನು ಸಿ.ಆರ್.ಪಿ.ಸಿ ಕಲಂ 164 ರಡಿಯಲ್ಲಿ ದಾಖಲಿಸಲು ಪ್ರಾಸಾ.18 ರಾಜಪ್ಪ ಜೆ.ಟಿ. ರವರ ಮುಖಾಂತರ ಕಡೂರಿನ 2 ನೇ ಸಿವಿಲ್ ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಮನವಿ ಪತ್ರದೊಂದಿಗೆ ಕಳುಹಿಸಿದ ಮೇರೆಗೆ, ಸದರಿಯವರು ನಿಪಿ.50 ರಂತೆ ಹೇಳಿಕೆಯನ್ನು ದಾಖಲಿಸಿದ ಪ್ರತಿಯನ್ನು ದಿಃ 22-01-2021 ರಂದು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -45 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ಬಳಸುತ್ತಿದ್ದ ಮೊಬೈಲ್ ಸಂಖ್ಯೆಃ 8792061449 ಗೆ ಸಂಬಂಧಿಸಿದ ಕಸ್ಟಮರ್ ಆಪ್ಲಿಕೇಷನ್ ಫಾರಂ ಮತ್ತು ಕಾಲ್ ವಿವರಗಳ ವರದಿಯನ್ನು ಸಂಬಂಧಿಸಿದವರಿಂದ ದೊರಕಿಸಿಕೊಡುವಂತೆ ಚಿಕ್ಕಮಗಳೂರಿನ ಜಿಲ್ಲಾ ವರಿಷ್ಠಾಧಿಕಾರಿಗಳಿಗೆ ನಿಪಿ.51 ಮತ್ತು ನಿಪಿ.52 ರಂತೆ ಮನವಿಯನ್ನು ಸಲ್ಲಿಸಿದರ ಮೇರೆಗೆ, ದಿಃ 04-02-2021 ರಂದು ಚಾಸಾ.27 ರವರಿಂದ ಇ-ಮೇಲ್ ಮೂಲಕ ಆರೋಪಿಯಾದ ನಿನಗೆ ಸಂಬಂಧಿಸಿದ ಮೊಬೈಲ್ ಕಾಲ್ ವಿವರಗಳ ವರದಿಯನ್ನು ನಿಪಿ.43 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -46 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 22-01-2021 ರಂದು ಚಾಸಾ.19 ಪ್ರತಾಪ್ ಬಿ.ಟಿ. ರವರು ನಿಪಿ.40 ರಂತೆ ಮೃತನ ಮರಣೋತ್ತರ ಪರೀಕ್ಷಾ ವರದಿಯನ್ನು ಹಾಗೂ ಆ ಕಾಲದಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ವೈದ್ಯಾಧಿಕಾರಿಗಳಿಂದ ಪಡೆದಿದ್ದನ್ನು ಪಂಚರಾದ ಪ್ರಾಸಾ-3 ದೇವರಾಜ ಮತ್ತು ಪ್ರಾಸಾ.12 ಗೋವಿಂದರಾಜು ರವರ ಸಮಕ್ಷಮ ಸಂಜೆ 5.30 ರಿಂದ 6 ಗಂಟೆಯವರೆಗೆ ನಿಪಿ.13 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತು ಪಡಿಸಿಕೊಂಡು, ಮುದ್ದೆಮಗಳನ್ನುನಿಪಿ.53 ರಂತೆ ಠಾಣಾ ಮಾಲುಪಟ್ಟಿ ಸಂಖ್ಯೆ 8/2021 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿ, ನಂತರ ದಿಃ 03-02-2021 ರಂದು ಸದರಿ ಮುದ್ದೆಮಾಲುಗಳನ್ನು ಚಾಸಾ.19 ರವರ ಮೂಲಕ ಮಂಗಳೂರಿನ ಆರ್.ಎಫ್.ಎಸ್.ಎಲ್. ಗೆ ವೈಜ್ಞಾನಿಕ ಪರೀಕ್ಷೆಗಾಗಿ ಮನವಿಯೊಂದಿಗೆ ಕಳುಹಿಸಿ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -47 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 04.02.2021 ರಂದು ಕಡೂರಿನ ಹೆಚ್.ಡಿ.ಎಫ್.ಸಿ. ಬ್ಯಾಂಕಿಗೆ ಭೇಟಿ ನೀಡಿ ಮೃತ ತಮ್ಮಯರವರು ತನ್ನ ಹೆಸರಿನಲ್ಲಿ ಟ್ರ್ಯಾಕ್ಟರ್ ಖರೀದಿಸಲು ಲೋನ್ ನ್ನು ಪಡೆದುಕೊಂಡಿದ್ದ ಬಗ್ಗೆ ಮತ್ತು ಬಾಕಿ ಉಳಿದಿದ್ದ ಸಾಲದ ಹಣದ ಬಗ್ಗೆ ಮಾಹಿತಿಯನ್ನು ನೀಡುವಂತೆ ಸದರಿ ಬ್ಯಾಂಕಿನ ಮ್ಯಾನೇಜರ್ ರಾದ ಪ್ರಾಸಾ.16 ಮಧು ರವರಿಗೆ ನಿಪಿ.29 ರಂತೆ ಮನವಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -48 ಪ್ರಾಸಾ-22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 01-03-2021 ರಂದು ಆರೋಪಿಯಾದ ನಿನ್ನ ಮೊಬೈಲ್ ಸಂಖ್ಯೆ 8792061449 ಗೆ ಸಂಬಂಧಿಸಿದಂತೆ ಚಾಸಾ.27 ರವರಿಂದ ಭಾರತೀಯ ಸಾಕ್ಷ್ಯ ಅಧಿ ನಿಯಮ 65-ಬಿ ರಡಿಯಲ್ಲಿ ದೃಢೀಕರಣ ಪತ್ರ, CDR ಮತ್ತು CAF ಗಳ ದೃಢೀಕೃತ ಪ್ರತಿಗಳನ್ನು ದೊರೆಕಿಸಿಕೊಡುವಂತೆ ಎಸ್ ಪಿ ಚಿಕ್ಕಮಗಳೂರವರಿಗೆ ನಿಪಿ.54 ರಂತೆ ಮನವಿ ಸಲ್ಲಿಸಿದ್ದಾಗಿ, ಅದೇ ದಿನ ಅವರ ಸೂಚನೆಯ ಮೇರೆಗೆ ಪ್ರಾಸಾ.20 ರವರು ತನಿಖಾ ಕಾಲದಲ್ಲಿ ನಿಪಿ.38 ರಂತೆ ಫೋಟೋಗಳನ್ನು ಒಂದು ಸಿಡಿಗೆ ವರ್ಗಾಯಿಸಿ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65-ಬಿರಡಿಯಲ್ಲಿ ನಿಪಿ.37 ದೃಢೀಕರಣ ಪತ್ರವನ್ನು ದಿನಾಂಕಃ 03-02-2021 ರಂದು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -49 ಪ್ರಾಸಾ-22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ

05-03-2021 ರಂದು ಪ್ರಾಸಾ.16 ಮಧು ರವರಿಂದ ಆರೋಪಿಯಾದ ನೀನು ಟ್ರಾಕ್ಟರನ್ನು ಖರೀದಿಸಲು ಹೆಚ್ ಡಿ ಎಫ್ ಸಿ ಬ್ಯಾಂಕ್ ನಲ್ಲಿ ಲೋನನ್ನು ಪಡೆದುಕೊಂಡ ಬಗ್ಗೆ ನಿಪಿ.31 ರಂತೆ ಸ್ಟೇಟ್ ಮೆಂಟನ್ನು ಸದರಿಯವರ ನಿ.ಪಿ.30 ವರದಿಯೊಂದಿಗೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ-50 ಪ್ರಾಸಾ-22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ನ್ಯಾಯಾಂಗ ಬಂಧನದಲ್ಲಿದ್ದ ಕಾರಣ FSL ವರದಿ ಮತ್ತು ವೈದ್ಯರ ಅಂತಿಮ ಅಭಿಪ್ರಾಯ ವರದಿಯನ್ನು ಪಡೆಯುವುದನ್ನು ಬಾಕಿ ಇರಿಸಿ ದಿನಾಂಕಃ 08-04-2021 ರಂದು ನ್ಯಾಯಾಲಯಕ್ಕೆ ಆರೋಪಿಯಾದ ನಿನ್ನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -51 ಪ್ರಾಸಾ-22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 03-08-2021 ರಂದು RFSL ಮಂಗಳೂರಿನ ಹಿರಿಯ ವೈಜ್ಞಾನಿಕಾಧಿಕಾರಿಯಾದ ಕಸ್ತೂರಿ ಒಡೆಯರವರು ನೀಡಿದ ವರದಿಯನ್ನುನಿಪಿ.55 ರಂತೆ ಪಡೆದುಕೊಂಡಿದ್ದಾಗಿ ಹಾಗೂ ಸದರಿ ಅಧಿಕಾರಿಯನ್ನು ಚಾಸಾ.31 ಎಂದು ಪರಿಗಣಿಸಬೇಕಾಗಿ ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ -52 ಪ್ರಾಸಾ-22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 04-10-2021 ರಂದು ಸದರಿ FSL ವರದಿಯನ್ನು ಮತ್ತು ಕೃತ್ಯಕ್ಕೆ ಬಳಸಿದ ಕಲ್ಲನ್ನು ಪ್ರಾಸಾ.21 ರವರಿಗೆ ಅವುಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ನಿಪಿ.56 ರಂತೆ ಮನವಿ ಮಾಡಿದ ಮೇರೆಗೆ, ಸದರಿಯವರು ಅದೇ ದಿನ ನಿಪಿ.41 ರಂತೆ ನೀಡಿದ ವರದಿಯನ್ನು ಪಡೆದುಕೊಂಡಿದ್ದಾಗಿ ಹಾಗೂ ದಿನಾಂಕ 13.12.2021 ರಂದು ಸದರಿ ನಿಪಿ.55, 56 ಮತ್ತು 41 ದಾಖಲೆಗಳನ್ನು ನ್ಯಾಯಾಲಯಕ್ಕೆ ಮನವಿಯೊಂದಿಗೆ ಸಲ್ಲಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು.

ಪ್ರಶ್ನೆ-53 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಇಲ್ಲ.

ಪ್ರಶ್ನೆ-54 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ ಇಲ್ಲ.

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ ಆತನು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

ದಿನಾಂಕಃ 05.06.2025.

ಸಹಿ/-
(ಭಾನುಮತಿ ಬಿ.ಸಿ. ),
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.